ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

2

ಇಲಾಖೆ / ವಿಷಯ : DEPARTMENT / SUBJECT: ವಿಧಾನಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ     ದಿನಾಂಕ : DATE 30/1/21

# ಸಂಸದೀಯ ಸಚಿವರಾಗಿ ಬೊಮ್ಮಾಯಿ ಶುಭಾರಂಭ

30/1/21

## ಮೊದಲ ದಿನವೇ ಪ್ರತಿಪಕ್ಷದ ಮನವೊಲಿಕೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಗೃಹ ಖಾತೆ ಜೊತೆಗೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಜವಾಬ್ದಾರಿ ವಹಿಸಿಕೊಂಡಿರುವ ಬಸವರಾಜ ಬೊಮ್ಮಾಯಿ ಅವರು ವಿಧಾನಮಂಡಲ ಅಧಿವೇಶನದ 2ನೇ ದಿನವಾದ ಶುಕ್ರವಾರದಿಂದ ತಮ್ಮ ಕಾರ್ಯಾರಂಭ ಮಾಡಿದರು.

ಸಂಸದೀಯ ವ್ಯವಹಾರಗಳ ಸಚಿವರ ಕೆಲಸ ಒರೆಗೆ ಹಚ್ಚುವುದೇ ಅಧಿವೇಶನ ನಡೆದಾಗ. ಶುಕ್ರವಾರ ವಿಧಾನಸಭೆಯ ಕಲಾಪ ಸಲಹಾ ಸಮಿತಿ ನಿಗದಿಯಾಗಿದ್ದರೂ ಪ್ರತಿಪಕ್ಷಗಳ ನಾಯಕರು ಬಹಿಷ್ಕರಿಸಿದರು. ಕಳೆದ ಎರಡು ಅಧಿವೇಶನಗಳಿಂದ ಕಲಾಪ ಸಲಹಾ ಸಮಿತಿ ಸಭೆಯ ನಿರ್ಣಯಗಳಿಗೆ ಸರ್ಕಾರ ಗೌರವ ನೀಡುತ್ತಿಲ್ಲ. ಹೀಗಾಗಿ, ಸಭೆಯಲ್ಲಿ ಪಾಲ್ಗೊಳ್ಳುವುದರಿಂದ ಪ್ರಯೋಜನವಿಲ್ಲ ಎಂಬ ನಿಲುವನ್ನು ವಿಪಕ್ಷ ನಾಯಕ



ಸಿದ್ದರಾಮಯ್ಯ ಅವರು ಹೊಂದಿದ್ದರು.

ಈ ನಿಟ್ಟಿನಲ್ಲಿ ಸಿದ್ದರಾಮಯ್ಯ ಅವರನ್ನು ಮನವೊಲಿಸಲು ಬೊಮ್ಮಾಯಿ ಅವರು ಸಾಕಷ್ಟು ಪ್ರಯತ್ನಿಸಿದರು. ಸಿದ್ದರಾಮಯ್ಯ ಜತೆ ಕುಳಿತು ಸಮಾಲೋಚನೆ ನಡೆಸಿದರು. ಪರಿಣಾಮ, ಸೋಮವಾರ ಸಭೆಗೆ ಬರಲು ಸಮ್ಮತಿಸಿದರು ಎನ್ನಲಾಗಿದೆ.